# ಪ್ರಜ್ಞಾವಂತ ಭೀಮಸೇನ

**ಸ್ವಾಮಿ ಶಿವಕಾಂತಾನಂದ**



*ಮಹಾಭಾರತದಲ್ಲಿ ಅತಿಶೂರನೂ ಪರಾಕ್ರಮಿಯೂ ಆದ ಭೀಮನ ಕಥೆಗಳನ್ನು ಯಾರು ಕೇಳಿಲ್ಲ? ಆದರೆ ಅವನ ವ್ಯಕ್ತಿತ್ವದ ಇನ್ನಿತರ ಎಳೆಗಳನ್ನು ಕುರಿತು ನಾವು ಆಲೋಚಿಸಿರಲಾರೆವು. ಅವನಲ್ಲಿ ಶ್ರದ್ಧೆ, ಭಕ್ತಿ , ವಿವೇಚನೆ, ಹೃದಯವಂತಿಕೆ, ಪ್ರೇಮ, ವಾತ್ಸಲ್ಯವೇ ಮುಂತಾದ ಉತ್ತಮ ಗುಣಗಳಿದ್ದವು; ಅವನೊಬ್ಬ ಸಂಭಾವಿತ ವ್ಯಕ್ತಿಯಾಗಿದ್ದ. ಈ ಬಗ್ಗೆ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು.*

ರಾತ್ರಿ ಕಳೆದು ಬೆಳಗಾಗುತ್ತ ಬಂದಾಗ ಪರ್ಣಪರ್ಯಂಕದ ಮೇಲೆ ಮಲಗಿರುವ ರಾಮನನ್ನು ನೋಡಿ ಪ್ರೀತಿಯಿಂದ ವಿಶ್ವಾಮಿತ್ರನು,

**ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।**
**ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಶ್ರಿತಮ್ ॥**

*(ರಾಮಾಯಣ)*

'ದೈವಮಾಹ್ನಿಕಮ್' ಎಂಬ ಪಾಠಾಂತರವೂ ಇದೆ. ದುಷ್ಟ ಶಿಕ್ಷಣ ಶಿಷ್ಟರಕ್ಷಣೆಗೆಂದು ಅವತರಿಸಿ ಬಂದ, 'ರಾಮೋ ವಿಗ್ರಹ ವಾನ್ ಧರ್ಮಃ' ಎಂದೇ ಪ್ರಸಿದ್ಧಿಯನ್ನು ಹೊಂದಿದ ರಾಮನನ್ನು, ಕೇವಲ ಆಹ್ನಿಕಾದಿಗಳಿಗೆ 'ನರಶಾರ್ದೂಲ' ಎಂದು ಸಂಬೋಧಿಸಿ ಋಷಿಯು ಎಬ್ಬಿಸುವನೆ? ಲೋಕಹಿತಕ್ಕಾಗಿ ದೇವತೆಯೇ ಆದ ನೀನು 'ಕರ್ತವ್ಯವನ್ನಾಶ್ರಯಿಸು' ಎಂದೇ ಹೇಳಿರಬೇಕು.

ರಾಮಚಂದ್ರನಿಗೆ ಯೌವ್ವನದಲ್ಲಿ ವೈರಾಗ್ಯವು ಉಂಟಾಯಿತು. ಆಗ ವಸಿಷ್ಠರು ಉಪದೇಶವನ್ನೀಯುತ್ತಾರೆ.

**ಯೇ ಸಮುದ್ಯೋಗಮುತ್ಸೃಜ್ಯ ಸ್ಥಿತಾ ದೈವಪರಾಯಣಾಃ।**
**ತೇ ಧರ್ಮಮರ್ಥಂ ಚ ಕಾಮಂ ಚ ನಾಶಯಂತ್ಯಾತ್ಮವಿದ್ವಿಷಾಃ॥**

*(ರಾಮಾಯಣ)*

ಯಾರು ತಮ್ಮ ಉದ್ಯೋಗಗಳನ್ನು ತ್ಯಜಿಸಿ ದೈವಪರಾಯಣ ರಾಗಿರುತ್ತಾರೋ ಅವರು ಧರ್ಮಾರ್ಥಕಾಮಗಳನ್ನೂ ವಿನಾಶ ಪಡಿಸಿಕೊಂಡು ಆತ್ಮದ್ವೇಷಿಗಳಾಗುತ್ತಾರೆ. (ಇಲ್ಲಿ ಕಾಮವನ್ನು ಕೇವಲ ಕ್ಷುಲ್ಲಕ ಕಾಮಕ್ಕೆ ಮಾತ್ರ ಅನ್ವಯಿಸದೆ ಮಹತ್ಕಾರ್ಯ ಗಳನ್ನು ಸಾಧಿಸುವ ಲೌಕಿಕ ಮನೋಭಿಲಾಷೆಗಳನ್ನು ಅರ್ಥೈಸ ಬೇಕು.)

ಧರ್ಮ ಸಂಸ್ಥಾಪನೆಗಾಗಿ ಅಡ್ಡಿಯಾಗಿರುವ ರಾಕ್ಷಸರ ಉಪ ಟಳಗಳನ್ನು, ಅಸುರರ ಅಸುಗಳನ್ನು ನೀಗಿಸುವುದರಿಂದ ಮಾತ್ರ ಅವತಾರ ಸಾಧನೆಯಾಗುವುದು ಎಂದಲ್ಲ, ಯೋಗಸ್ಥಾಪನೆಯೂ ಸಹ ಅವತಾರೋದ್ದೇಶವಾಗಿರುತ್ತದೆ. ಶ್ರೀ ಕೃಷ್ಣನೇ ಭಗವದ್ಗೀತೆ ಯಲ್ಲಿ ತಿಳಿಸಿರುವಂತೆ –

**ಸ ಕಾಲೇನೇಹ ಮಹಾತಾ ಯೋಗೋ ನಷ್ಟಃ ಪರಂತಪ।...**
**ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ।**

*(ಗೀತೆ, ೪.೨-೩)*

ಕಾಲಾಂತರದಿಂದ ಪರಂಪರಾ ನಷ್ಟವಾದ ಯೋಗವನ್ನು ಉಪದೇಶಿಸಿ ಗುರು-ಶಿಷ್ಯ ಪರಂಪರೆಯ ಕೊಂಡಿಗಳನ್ನು ಸರಿ ಪಡಿಸಲೂ ಭಗವಂತನು ಅವತರಿಸುತ್ತಾನೆ. ಶ್ರೀರಾಮಕೃಷ್ಣರು ತಮ್ಮ ಅವತಾರದಲ್ಲಿ ಈ ಯೋಗ ಪ್ರತಿಷ್ಠಾಪನಾ ಕಾರ್ಯವನ್ನು ಮಾತ್ರ ಕೈಗೊಂಡರು. ಅದಕ್ಕಾಗಿಯೇ ಸ್ವಾಮಿ ವಿವೇಕಾನಂದರು ಅವರನ್ನು ಅವತಾರವರಿಷ್ಠರೆಂದು ಕರೆದರು.

ಧರ್ಮದ ಹೂರಣವಾದ ಈ ಆತ್ಮಯೋಗವನ್ನು ರಕ್ಷಿಸಲು ಅದನ್ನು ಅನುಸರಿಸುತ್ತಿರುವ ಸಾಧು, ಸಜ್ಜನರ ರಕ್ಷಣೆ ಅಗತ್ಯ ವಿದೆ. ಅಭೇದ್ಯ ಚಕ್ರವ್ಯೂಹದಂತೆ ಒಳ ಆವರಣಗಳನ್ನು ರಕ್ಷಿಸ ಬೇಕಾದರೆ ಅದರ ಹೊರ ಆವರಣದಲ್ಲಿರುವ (Peripheral) ವ್ಯೂಹಗಳೂ ಬಲಿಷ್ಠವಾಗಿರಬೇಕು. ಎಲ್ಲಿಯವರೆಗೂ ರಾಷ್ಟ್ರದಲ್ಲಿ ಸಜ್ಜನರಿಗೆ ಸುರಕ್ಷತೆಯಿಲ್ಲವೋ, ಸಜ್ಜನಿಕೆಗೆ ಬೆಲೆಯಿಲ್ಲವೋ ಅಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ರಕ್ಷಿಸಲು ಸಾಧ್ಯವಿಲ್ಲ. ಎಲ್ಲವೂ ದೈವಾಧೀನವೆಂಬ ಮುಖವಾಡದ ಪರಾಧೀನತೆಯೇ ಹೆಚ್ಚಾಗಿ ಸಾತ್ತ್ವಿಕತೆಗಿಂತ ಉದಾಸೀನತೆ ಮತ್ತು ತಾಮಸಿಕತೆಯೇ ಹೆಚ್ಚಾಗಿ ಬಿಡುತ್ತದೆ. ಅಧಿಕಾರ, ರಾಜ್ಯ, ಸಂಪತ್ತು, ಸ್ತ್ರೀ ಮುಂತಾದವು ದುಷ್ಟರ ಪಾಲಾಗಿ ಪರಾಡಳಿತ, ಅನ್ಯಾಯ, ಹುಸಿ ನುಡಿಯು ವುದು, ಮೋಸ ಮಾಡುವುದು ಮುಂತಾದುವೇ ದುಷ್ಕೃತ್ಯಗಳು ಮೇದಿನಿಯನ್ನು ತುಂಬಿಬಿಡುತ್ತವೆ. ಆಧ್ಯಾತ್ಮ ಚಿಂತನೆಯ ಜೊತೆ ಭೌತಿಕ ಪ್ರಜ್ಞೆಯನ್ನು ತೂಗಿಕೊಂಡು ಹೋಗುವ ವ್ಯಕ್ತಿತ್ವವನ್ನು

ಹೊಂದಿರುವ ರಾಷ್ಟ್ರಪಾಲಕರು ದೊರಕುವುದು ಅಷ್ಟು ಸುಲಭವಲ್ಲ. ಆಧ್ಯಾತ್ಮಿಕ ಶಿಖರಕ್ಕೇರಿದ್ದರೂ ಸಹ ಅರ್ಥಕಾಮಗಳನ್ನು ಹತೋಟಿಯಲ್ಲಿಟ್ಟು ನಡೆಸುವ ನಾಯಕರ, ರಾಷ್ಟ್ರರಕ್ಷಕರ, ರಾಷ್ಟ್ರ ಸೇವಕರ ನಿರ್ಮಾಣ ಆವಶ್ಯಕ. ರಾಜನು ಬಯಸುವ ಅರ್ಥ ಕಾಮಗಳು ಶಾಸ್ತ್ರೀಯ ಸ್ವರೂಪದ್ದಾಗಿರಬೇಕು. ಆದ್ದರಿಂದಲೇ ಚಾಣಕ್ಯನು ಹೇಳುತ್ತಾನೆ:

**ಸುಖಸ್ಯ ಮೂಲಂ ಧರ್ಮಃ । ಧರ್ಮಸ್ಯಮೂಲಮರ್ಥಃ ।**
**ಅರ್ಥಸ್ಯಮೂಲಂ ರಾಜ್ಯಮ್। ರಾಜ್ಯಮೂಲಮಿಂದ್ರಿಯನಿಗ್ರಹಃ ॥**

*(ಚಾಣಕ್ಯ ಸೂತ್ರಮ್)*

**'ರಾಜ್ಯಂ ತಿಷ್ಠತಿ ದಕ್ಷಸ್ಯ ಸಂಗೃಹೀತೇಂದ್ರಿಯಸ್ಯ ಚ'** *(ಶಾಂತಿ ಪರ್ವ).* ಇಂದ್ರಿಯಜಯನಾದ ರಾಜನ ಬಳಿಯಲ್ಲಿ ರಾಜ್ಯವು ಸುರಕ್ಷಿತವಾಗಿರುತ್ತದೆ.

**ರಕ್ಷಣಂ ಸರ್ವಭೂತಾನಾಮಿತಿ ಕ್ಷಾತ್ರಂ ಪರಂ ಮತಮ್ ।** *(ಶಾಂತಿಪರ್ವ)* 'ಕ್ಷಾತ್ರವೆಂದರೆ ಸರ್ವಭೂತಗಳನ್ನೂ ರಕ್ಷಿಸುವುದೇ ಎಂಬುದು ನನ್ನ ಮತ' ಎಂದು ಭೀಷ್ಮನು ಯುಧಿಷ್ಠಿರನಿಗೆ ಉಪದೇಶವನ್ನೀಯುತ್ತಾನೆ.

ಧರ್ಮವನ್ನು ಕಾಪಾಡಲು ಐಶ್ವರ್ಯವು ಆವಶ್ಯಕ. ಅದು ಇಂದ್ರಿಯನಿಗ್ರಹವುಳ್ಳ ರಾಜನ ಬಳಿ ಇರಬೇಕು. ಆಗ ಮಾತ್ರ ರಾಜ್ಯವು ಉತ್ತಮಗತಿಯಲ್ಲಿ ನಡೆಯುವುದು, ಅಭಿವೃದ್ಧಿಯನ್ನು ಹೊಂದುವುದು. ಹದ್ದಿಲ್ಲದ ಕಾಮವೇ ಪಾಪಕ್ಕೆ ಮೂಲ ಕಾರಣ. ಮಹಾಗ್ರಾಹಿಯಾದ ಲೋಭದಿಂದ ಅಧರ್ಮ, ದುಃಖ, ಮೋಸ ಅನ್ಯಾಯ ಹೀಗೆ ನಮ್ಮನ್ನು ಅಧಃಪತನಕ್ಕೆ ಕೊಂಡೊಯ್ಯುತ್ತದೆ.

ಅರ್ಥಕ್ಕೆ ಮೂಲ ಉದ್ಯೋಗವೆಂದು ಇನ್ನೊಂದೆಡೆ ತಿಳಿಸಿದ್ದಾನೆ. 'ಅರ್ಥಸ್ಯ ಮೂಲಂ ಕಾರ್ಯಮ್'. ಆದ್ದರಿಂದಲೇ ಶ್ರೀಕೃಷ್ಣನೂ ಸಹ,

**ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮ್ಯಣ್ಯತಂದ್ರಿತಃ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**

*(ಗೀತೆ ೩.೨೩)*

ರೆಪ್ಪೆಮುಚ್ಚುವಷ್ಟು ಕಾಲ ಪ್ರಮಾಣದಷ್ಟೂ ಶ್ರೀಕೃಷ್ಣನು ಸುಮ್ಮನಿರಲಿಲ್ಲ. ನಾನು ಕರ್ಮವನ್ನು ಮಾಡದಿದ್ದರೆ ನನ್ನನ್ನೇ ಮನುಷ್ಯರು ಅನುಸರಿಸುತ್ತಾರೆ. ಕರ್ತವ್ಯ ಶೂನ್ಯತ್ವ ಸೋಮಾರಿತನದಿಂದ ಜನರು ದರಿದ್ರರೂ ಮೂರ್ಖರೂ ಆಗುತ್ತಾರೆ. ಶೂರರೂ ಪರಾಕ್ರಮಿಗಳೂ ಇಲ್ಲದಿದ್ದರೆ ಈ ಸೋಮಾರಿಗಳಿಗೂ ಹೆಚ್ಚು ಉಳಿಗಾಲವಿಲ್ಲವೆಂಬುದನ್ನು ಅವರು ಅರಿತುಕೊಳ್ಳುವುದಿಲ್ಲ. ಆದ್ದರಿಂದ ರಾಷ್ಟ್ರವನ್ನೂ, ರಾಷ್ಟ್ರದಲ್ಲಿ ಧರ್ಮವನ್ನು ರಕ್ಷಿಸಲು ಕರ್ಮದ ಆವಶ್ಯಕತೆಯೂ ಇದೆ.

### ಭೀಮ

ಧರ್ಮಾರ್ಥಕಾಮಮೋಕ್ಷ ಸಮ್ಮಿಳಿತಗೊಂಡ ಬದುಕನ್ನು ಹೇಗೆ ನಡೆಸಬೇಕೆಂದು ತೋರುವ ಇತಿಹಾಸವೇ ಹಿಂದೆ 'ಜಯ' ಎಂದು ಕರೆಯಲ್ಪಡುತ್ತಿದ್ದ ಮಹಾಭಾರತ. ಮಹಾಭಾರತದಲ್ಲಿ ಅತ್ಯಂತ ಕುತೂಹಲ ಕೆರಳಿಸುವ ಮತ್ತು ಅನೇಕ ರೀತಿಯ ವಿಶ್ಲೇಷಣೆಗೆ ಒಳಗಾಗಿರುವ ಪಾತ್ರವೆಂದರೆ ಭೀಮಸೇನನದ್ದು. 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ನಿಃಸ್ವಾರ್ಥ ಕರ್ಮದಲ್ಲಿ ಧರ್ಮ-ರಾಷ್ಟ್ರರಕ್ಷಣೆಯೆಂಬ ಗುರುತರ ಹೊಣೆಯಲ್ಲಿ ಅತಿ ಕಷ್ಟಕರವಾದ, ಯಾರಿಗೂ ಬೇಡವಾದ ಪಾಪಾಶ್ರಯವಾದ ಹಿಂಸೆಯೇ ಮುಂತಾದ ಕಹಿಗುಳಿಗೆಗಳಿವೆ. ಅಂತಹ ಕಹಿಗುಳಿಗೆಗಳನ್ನು ನುಂಗುತ್ತಾ ಎರಡು ಮೂರು ಬಾರಿ ವಿಷ ಪ್ರಾಶನ ಮಾಡಿಸಿದರೂ ಬದುಕಿ ಹೊರಬಂದ ಭೀಮಸೇನನು ಮಾಡಿ ತೋರಿಸಿದ.

ಸ್ವಾಮಿ ವಿವೇಕಾನಂದರು, ''ನಮ್ಮ ದೇಶಕ್ಕೆ ಇಂದು ಬೇಕಾಗಿರುವುದು, ಕಬ್ಬಿಣದಂತಹ ಮಾಂಸ ಖಂಡಗಳು, ಉಕ್ಕಿನಂತಹ ನರಗಳು ಇರುವ ವ್ಯಕ್ತಿಗಳು'' ಎಂದು ತಿಳಿಸಿದರು. ಮಹಮ್ಮದ್ ಸರ್ಫರಾಜ್ ಹುಸೇನರಿಗೆ ತಾ. ೧೦.೦೬.೧೮೯೮ರಂದು ಆಲ್ಮೋರ ದಿಂದ ಬರೆದ ಪತ್ರದಲ್ಲಿ ''ನಮ್ಮ ಮಾತೃಭೂಮಿಗೆ ಇಸ್ಲಾಂ-ವೇದಾಂತ, ಈ ಎರಡು ಮಹಾವ್ಯವಸ್ಥೆಯ ಸಮಾಗಮವೇ ಏಕಮಾತ್ರ ಆಶಯ. ವೇದಾಂತದ ಮೆದುಳು-ಇಸ್ಲಾಂ ಶರೀರ. ನಾನು ನನ್ನ ದೂರದೃಷ್ಟಿಯಿಂದ ಭಾರತದ ಪರಿಪೂರ್ಣ ಭವಿಷ್ಯವನ್ನು, ಈಗಿರುವ ಗೊಂದಲ, ವೈಮನಸ್ಯಗಳ ನಡುವೆಯೂ ಉದ್ಭವಿಸುತ್ತಿರುವುದನ್ನು ನೋಡುತ್ತಿದ್ದೇನೆ. ಅದೇ ವೈಭವವಾದ ಅಜೇಯವಾದ ವೇದಾಂತದ ಮೆದುಳು ಮತ್ತು ಇಸ್ಲಾಂ ಶರೀರದ ಮಿಲನದಿಂದ ಇದು ಸಾಧ್ಯ''.

ಸ್ವಾಮಿ ವಿವೇಕಾನಂದರು ಬಾಹುಬಲ-ಮನೋಬಲ-ಬುದ್ಧಿಬಲ ಈ ಮೂರನ್ನು ಒಗ್ಗೂಡಿ ವೃದ್ಧಿಸಬೇಕೆಂದು ಬೋಧಿಸಿದವರು. ''ಯುವಕರೇ ನೀವು ಗೀತೆಯನ್ನು ಓದುವುದಕ್ಕಿಂತ ಫುಟ್‌ಬಾಲ್ ಮೂಲಕ ಸ್ವರ್ಗಕ್ಕೆ, ಹತ್ತಿರವಾಗುವಿರಿ... ಗೀತೆಯನ್ನು ನಿಮ್ಮ ರಟ್ಟೆಯ ಬಲದಿಂದ ಹೆಚ್ಚು ಅರ್ಥಮಾಡಿಕೊಳ್ಳುವಿರಿ. ಶ್ರೀಕೃಷ್ಣನ ಮಹಾತ್ಮೆಯನ್ನು, ಮಹಾಬಲವನ್ನು ನಿಮ್ಮಲ್ಲಿ ಬಿಸಿರಕ್ತವಿದ್ದಲ್ಲಿ ಚೆನ್ನಾಗಿ ಅರ್ಥಮಾಡಿಕೊಳ್ಳುವಿರಿ. ನೀವು ಉಪನಿಷತ್ತುಗಳಲ್ಲಿ ಬೋಧಿಸಿರುವ ಆತ್ಮ ಮಹಿಮೆಯನ್ನರಿತು, ನಿಮ್ಮ ಕಾಲಮೇಲೆ ದೃಢವಾಗಿ ನಿಲ್ಲುವ ಸಾಮರ್ಥ್ಯವನ್ನು ತಿಳಿದು, 'ಪುರುಷರು ನಾವು' ಎಂದು ನಿಮಗೆ ಅನ್ನಿಸಿದಾಗ ಮಾತ್ರ ಅದು ಅರ್ಥವಾಗುವುದು.''

ಪ್ರಾಯಃ ಅಂತಹ ಒಂದು ಶಾರೀರಿಕ, ಬೌದ್ಧಿಕ, ಕ್ರಿಯಾಶೀಲತೆಯ ಉತ್ಕೃಷ್ಟತೆಯ ಸಮ್ಮಿಲನವನ್ನು ಭೀಮನಲ್ಲಿ ಕಾಣಬಹುದು. ಭೀಮನನ್ನು ಸ್ಥೂಲಕಾಯನಂತೆ ಡೊಳ್ಳು ಹೊಟ್ಟೆಯವನಂತೆ ಚಿತ್ರಿಸಿರುತ್ತಾರೆ. ಆದರೆ ವ್ಯಾಸರು ಪ್ರಮಾಣಬದ್ಧ ಶರೀರದವನಾಗಿ, ಸುಂದರನೂ, ತೇಜಸ್ವಿಯೂ ಆಗಿದ್ದನು ಎಂದು ವರ್ಣಿಸಿದ್ದಾರೆ. ಅವನು ಸ್ವರ್ಣವರ್ಣದವನೂ, ಮತ್ತ ಮಾತಂಗ ಜಗಾಮಿನಿಯೂ ಆಗಿದ್ದನು, ಬಾಹುಗಳು ಸಿಂಹಸದೃಶವಾಗಿದ್ದು ದೀರ್ಘವಾಗಿತ್ತು. ಭೀಮನನ್ನು ವೃಕೋದರನೆಂದು ಭಗವದ್ಗೀತೆಯಲ್ಲೂ ತಿಳಿಸಿದೆ. ವೃಕ ಎಂದರೆ ತೋಳ, ತೋಳದಂತೆ ವಿಪರೀತ

ಹಸಿವುಳ್ಳವನೂ, ತೆಳುವಾದ ಹೊಟ್ಟೆಯುಳ್ಳವನೆಂದೇ ಅರ್ಥ. ಗಟ್ಟಿಮುಟ್ಟಾದ ವಿಶ್ವಾಸದ ಅಭಿವ್ಯಕ್ತತೆಯನ್ನು ಸೂಚಿಸುತ್ತಿರುವ ಚಲನ ವಿಗ್ರಹವೇ ಹಿಂದಿನ ಅವತಾರದಲ್ಲಿ ಹನುಮನಾಗಿದ್ದ ಈ ಭೀಮದೇವರು. ತುಲನೆಗಾಗಿ ಈಗಿನ ಯುವಕರು ಹರ್ಕ್ಯುಲಿಸ್ ಅಥವಾ ಟಾರ್ಜಾನರಂತೆ ಇದ್ದಿರಬಹುದೆಂದು ಭಾವಿಸಬಹುದು.

ಈ ಬಾಹ್ಯ ಸೌಷ್ಠವಗಳನ್ನು ಬಿಟ್ಟು ಆಂತರಿಕ ವಿಷಯಗಳ ಕಡೆ ಬರೋಣ. ಧೃತರಾಷ್ಟ್ರನು ಭೀಮನು ವಿದ್ವಾನ್, ಸಂಭಾಷಣಾ ಚತುರನೆಂದು ವರ್ಣಿಸಿರುತ್ತಾನೆ. ಲೌಕಿಕ-ಅಲೌಕಿಕ ಪ್ರಜ್ಞೆ, ವಿದ್ವತ್ತು ಮತ್ತು ರಾಜಕೀಯ ಮುತ್ಸದ್ದಿತನ ಇವೆರಡೂ ಸಮ್ಮಿಳಿತವಾಗಿತ್ತು. ಚಿಕ್ಕವಯಸ್ಸಿನಿಂದಲೂ ಯುದ್ಧ, ಓಟ, ವಿದ್ಯಾಭ್ಯಾಸ ಮುಂತಾದ ಪ್ರತಿಯೊಂದು ವಿಷಯದಲ್ಲಿಯೂ ಕುರುಪುತ್ರರು ಭೀಮನೊಟ್ಟಿಗೆ ಸ್ಪರ್ಧೆಗಿಳಿಯುತ್ತಿದ್ದರು. ಎಲ್ಲರೂ ಕೂಡಿ ಎರಿಹೋದರೂ ಅವರೆಂದಿಗೂ ಜಯಶಾಲಿಗಳಾಗಲಿಲ್ಲ. ಅವನ ಅಜೇಯತ್ವವನ್ನು ಕಂಡು ಅಂದಿನಿಂದಲೇ ದುರ್ಯೋಧನನಿಗೆ ಹೊಟ್ಟೆ ಉರಿ. ವಿಷಪ್ರಾಶನವನ್ನು ಮಾಡಿಸುವಷ್ಟು ದೊಡ್ಡ ಮತ್ಸರವಾಯಿತು. ಬಲ, ಶೌರ್ಯ ತೇಜಸ್ಸು, ಪ್ರಚಂಡ ಬುದ್ಧಿಶಕ್ತಿ, ವ್ಯಾವಹಾರಿಕ ಪ್ರಜ್ಞೆ, ದೇಶರಕ್ಷಣೆ, ದುಷ್ಟ ಶಿಕ್ಷಣೆ-ಶಿಷ್ಟರಕ್ಷಣೆ, ಕ್ರಿಯಾಶೀಲತೆ ಎಲ್ಲವೂ ಈ ಒಂದು ಜೀವೋತ್ತಮನಲ್ಲಿ ಕಂಡು ಬರುತ್ತಿತ್ತು. ಜೊತೆಗೆ ದಯಾಪರನೂ, ಕೋಮಲ ಹೃದಯದವನೂ ಆಗಿದ್ದನು. ಯಾರೋ ಕಷ್ಟಕ್ಕೆ ಬಂದರೆ ಕೂಡಲೇ ಧಾವಿಸುತ್ತಿದ್ದವನು ಯಾವಾಗಲೂ ಇವನೇ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಉಕ್ತಿಗೆ ತಕ್ಕನಾದ ವ್ಯಕ್ತಿತ್ವ.

### ಧರ್ಮಸಂಕಟ

ಧರ್ಮದ ಅರ್ಥ ಅನುಷ್ಠಾನವು ಅತಿ ಸೂಕ್ಷ್ಮವೂ ಗಹನವೂ ಆದ ವಿಚಾರ.

**ಅಣೀಯಾನ್ ಕ್ಷುರಧಾರಾಯಾ ಗರೀಯಾನಪಿ ಪರ್ವತಾತ್**

*(ಶಾಂತಿಪರ್ವ ೨೬೦-೧೨)*

ಕತ್ತಿಯ ಅಲುಗಿನಂತೆ ಸೂಕ್ಷ್ಮವೂ ಪರ್ವತಕ್ಕಿಂತ ಹೆಚ್ಚಾಗಿಯೂ ಇರುತ್ತದೆ.

ನಮ್ಮ ಸನಾತನ ಧರ್ಮವಂತೂ ಈ ಧರ್ಮದ ಮೇಲೆಯೇ ನಿಂತಿದೆ. 'ಮಹಾಭಾರತದಲ್ಲಿ ಅಹಿಂಸಾ ಪರಮೋಧರ್ಮಃ' ಎಂದು ಅನೇಕ ಬಾರಿ ತಿಳಿಸಿದೆ (ಹಾಗೆಯೇ 'ಧರ್ಮಂ ಹಿಂಸಾ ಸ್ತಥೈವ ಚ' ಎಂದೂ ತಿಳಿಸಿದೆ). ವೇದಗಳೂ 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ। ಲೋಕೇ ಧರ್ಮಿಷ್ಠಂ ಪ್ರಜಾ ಉಪಸರ್ಪಂತಿ। ಧರ್ಮೇಣ ಪಾಪಮಪನುದಂತಿ। ಧರ್ಮೇ ಸರ್ವಂ ಪ್ರತಿಷ್ಠಿತಂ। ತಸ್ಮಾದ್ ಧರ್ಮಂ ಪರಮಂ ವದಂತಿ॥' *(ಕೃಷ್ಣಯಜುರ್ವೇದ)* ಎಂದು ಸಾರುತ್ತವೆ.

**ಧರ್ಮಸ್ಯ ಕ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ।**
**ಯಾ ಯಾ ವಿಕ್ರಿಯತೇ ಸಂಸ್ಥಾ ತತಃ ಸಾಪಿ ಪ್ರಣಶ್ಯತಿ॥**

*(ಶಾಂತಿಪರ್ವ ೨೬೦-೧೧)*

ಧರ್ಮದ ಅನುಷ್ಠಾನವು ಯಥಾವತ್ತಾಗಿ ನಡೆಯುವಾಗ ದುರಾತ್ಮರು ಮೂಲಸ್ಥಾನವನ್ನೇ ವಿಕೃತಗೊಳಿಸುತ್ತಾರೆ. ನಂತರ ಧರ್ಮವೇ ನಾಶವಾಗುತ್ತದೆ. ಆಗ ಧರ್ಮವು ತಿರುಳಿಲ್ಲದ, ತೋರಿಕೆಗೆ ತೊಗಟೆ ಮಾತ್ರ ಇರುವ ಶಿಥಿಲ ಮರದಂತಿರುತ್ತದೆ ಎಂದರ್ಥ.

ಶ್ರೀಕೃಷ್ಣನು ಅರ್ಜುನನಿಗೆ ಹಿಂಸಾಯುಕ್ತವಾದ ಯುದ್ಧವನ್ನು ಮಾಡು ಎಂದು ಅಹಿಂಸೆಯಿಂದ ವಿಮುಖನನ್ನಾಗಿ ಮಾಡಿ ಯುದ್ಧಕ್ಕೆಳೆದನಲ್ಲ ಎನಿಸಬಹುದು. ಅರ್ಜುನನು ಈ ಧರ್ಮದ ಸೂಕ್ಷ್ಮತೆಯನ್ನರಿಯದೇ ವಿಷಾದಿಸುತ್ತಾನೆ. ಗುರುಹಿರಿಯರು, ರಕ್ತಸಂಬಂಧಿಗಳು, ಆತತಾಯಿಗಳನ್ನು ಕೊಂದರೆ ನಮಗೇ ಪಾಪ ಬರುತ್ತದೆ ಎಂದು ಕೃಷ್ಣನಿಗೇ ಉಪದೇಶವೀಯುತ್ತಾನೆ. ಕುಲಘ್ನತೆ, ವರ್ಣಸಂಕರ, ಕುಲಧರ್ಮ, ಕುಲಕ್ಷಯ, ಪಿಂಡೋದಕ ಕ್ರಿಯೆ ಮುಂತಾದವನ್ನು ಬಡಬಡಿಸುತ್ತಾನೆ. ಕೈಯ್ಯೆಲ್ಲಾ ಬೆವರಾಗಿ ಗಾಂಡೀವವೂ ಕೈ ಜಾರಿ. ಶಸ್ತ್ರತ್ಯಾಗ ಮಾಡಿ ಇಷ್ಟು ವರ್ಷಗಳೂ ಹೋರಾಟದ ಛಲವನ್ನಿರಿಸಿಕೊಂಡವನು, ದಿವ್ಯಾಸ್ತ್ರಗಳನ್ನು ಸಂಪಾದಿಸಿದವನು ಭ್ರಮೆಗೊಂಡು, ಕ್ಲೇಶವನ್ನು ಹೊಂದಿ ಯುಧಿಷ್ಠಿರನಂತೆಯೇ ಭೈಕ್ಷಚರ್ಯವೇ ಮೇಲೆಂಬ ದೀನತೆಗೆ ಒಳಗಾಗುತ್ತಾನೆ. ಇಂತಹ ಸ್ಥಿತಿಯನ್ನು ಹೊಂದಿದ ಅರ್ಜುನನಿಗೆ 'ಅನಾರ್ಯಜುಷ್ಟಮಸ್ವರ್ಗ್ಯಂ ಅಕೀರ್ತಿಕರಂ' ಎಂದು ಕೃಷ್ಣ ಜರೆದಿದ್ದಾನೆ. ಆದರೆ ಭೀಮನಿಗೆ ಈ ತರಹದ ದ್ವಂದ್ವವು ಎಂದೂ ಕಾಡಲಿಲ್ಲ. ಹಿಂಸೆಯಿಲ್ಲದ ಆದರ್ಶ ಸಮಾಜವಾಗಬೇಕಾದರೆ ಅದರ ಘಟಕವಾದ ಪ್ರತಿಯೊಬ್ಬ ನಾಗರಿಕನೂ ಪರಿಪೂರ್ಣನೂ, ಪ್ರಬುದ್ಧನೂ, ಆಧ್ಯಾತ್ಮಿಕ ಪರನೂ ಆದರೆ ಸರಿ ಹೋದೀತು. ಎಲ್ಲಿಯವರೆಗೂ ಮನುಷ್ಯನ ಮನ, ಆಚಾರ ಮತ್ತು ಕೃತಿಗಳಲ್ಲಿ ದುರ್ಗುಣ, ದುಷ್ಟತನವು ಇರುವುದೋ ಅಲ್ಲಿಯವರೆಗೂ ದಂಡನೀತಿಯು ಇರಲೇಬೇಕಾಗುತ್ತದೆ.

ಅದನ್ನೇ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ತಿಳಿಸಿರುವುದು.

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।**
**ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

*(ಗೀತೆ, ೪.೮)*

ಸ್ವಾಮೀಜಿಯವರು ಜಪಾನ್ ಮತ್ತು ಪಾಶ್ಚಾತ್ಯ ನಾಡಿನಿಂದ ಭರತಖಂಡದ ಉದ್ಧಾರಕ್ಕಾಗಿ ಗ್ರಹಿಸಿದ ಅಂಶಗಳೆಂದರೆ ಅವರ ಸಂಘಟನಾ ಶಕ್ತಿ, ಕ್ಷಾತ್ರ, ಜೀವನಾಸಕ್ತಿ, ಯತ್ನಶೀಲತೆ, ರಾಷ್ಟ್ರಪ್ರೇಮ ಮತ್ತು ಶ್ರೀಮಂತಿಕೆ. ಅವರು ಭಾರತದಲ್ಲಿ ಸಂಚರಿಸುವಾಗ ಬಡತನ ಎಲ್ಲೆಲ್ಲೂ ಕಾಣುತ್ತಿತ್ತು. ತಾಮಸಿಕತೆ, ಮೌಢ್ಯ, ಅಸೂಯೆ, ಅನಾರೋಗ್ಯ, ದಾರಿದ್ರ್ಯ ಮತ್ತು ಸ್ಥಳೀಯ ದುಷ್ಟರಿಂದ ದುರ್ಬಲರ ಮೇಲೆ ದಬ್ಬಾಳಿಕೆ. ಅಲಕ್ಷ್ಮಿಯು ಎಲ್ಲೆಲ್ಲೂ ಹೊಕ್ಕಂತಿತ್ತು. ಈ ಅಭಾವವನ್ನೇ ವೈರಾಗ್ಯವನ್ನಾಗಿ ಮಾಡಿಕೊಂಡ ಅರ್ಥಹೀನ ಧಾರ್ಮಿಕ ಸಮಾಜವನ್ನು ಸ್ವಾಮೀಜಿ ಕಂಡರು. ನಿತ್ಯಜೀವನಕ್ಕೆ ಹೊಟ್ಟೆಬಟ್ಟೆಗೆ ಕಷ್ಟಪಡುವ ಈ ಶೋಚನೀಯ

ಪರಿಸ್ಥಿತಿಗೆ ನಿರ್ವೀಯತೆ, ಹೋರಾಟಮಾಡಬೇಕೆಂಬ ಛಲವಿಲ್ಲದ ಧೈರ್ಯಹೀನತೆ, ಭೈಕ್ಷಚರ್ಯದ ಹಾಗೂ ಮರಣಾಸಕ್ತಿಯ ಪ್ರವೃತ್ತಿಯೇ ದೇಶ ದಲ್ಲಿ ಕಾಣುತ್ತಿತ್ತು. ಆದ್ದರಿಂದಲೇ ಅವರ ಬಾಹ್ಯಶಕ್ತಿಗೂ ಕೊಂಚ ಒತ್ತು ನೀಡಬೇಕಾದ, ಕೃಷ್ಣನಂತೆ ಉಪದೇಶಗಳೆಂಬ ಚಾಟಿ ಏಟನ್ನು ಪಾಶ್ಚಿಮಾತ್ಯ ದೇಶದಿಂದ ಬಂದ ಕೂಡಲೇ ನೀಡಿದರು.

## ಭೀಮನ ಮುತ್ಸದ್ದಿತನ ಹಾಗು ರಾಜಕೀಯ ದೃಷ್ಟಿ

ಶ್ರೀಕೃಷ್ಣನು ಪಾಂಡವರ ದೂತನಾಗಿ ಸಂಧಾನಕ್ಕೆ ಹೋದಾಗ ಧೃತರಾಷ್ಟ್ರನೇ ದುರ್ಯೋಧನನ ಹಿಂದೆ ಬೆನ್ನೆಲುಬಾಗಿ ನಿಂತಿದ್ದಾನೆ ಎಂದು ತಿಳಿದು ಹೋಯಿತು. ಆದರೆ ಇದೇ ವಿಷಯವನ್ನು ಭೀಮನು ೧೩ ವರ್ಷಗಳ ಹಿಂದೆಯೇ ತಿಳಿದುಕೊಂಡಿದ್ದನು. ಪರಿಸ್ಥಿತಿಯ ವಿಶ್ಲೇಷಣೆ, ಅವಲೋಕನಶಕ್ತಿ, ಸಮರನೀತಿ, ರಾಜನೀತಿ ಮತ್ತು ಧರ್ಮದ ಸೂಕ್ಷ್ಮಾತಿಸೂಕ್ಷ್ಮತೆಗಳ ಪರಾಮರ್ಶೆಯಲ್ಲಿ ಕೃಷ್ಣ-ಭೀಮರ ದೃಷ್ಟಿ ಅನೇಕ ಸಂದರ್ಭಗಳಲ್ಲಿ ಒಂದೇ ಆಗಿರುವುದು ಕಂಡು ಬರುತ್ತದೆ. ಈ ರೀತಿ ಮುತ್ಸದ್ದಿತನದಲ್ಲಿ ಭೀಮನು ಕೃಷ್ಣನಷ್ಟೇ, ಅಥವಾ ಕೃಷ್ಣನಿಗಿಂತ ಸ್ವಲ್ಪ ಅಧಿಕವಾಗಿಯೇ ಪಳಗಿದ್ದನು. ಕೃಷ್ಣನು ಶಕಟ, ಧೇನುಕ, ಪೂತನಿ ಮುಂತಾದ ರಾಕ್ಷಸರನ್ನೂ, ಕಂಸ, ಚಾಣೂರ ಮುಂತಾದ ದಾನವರನ್ನೂ ಶಿಶುಪಾಲನಂತಹ ರಾಜರನ್ನೂ ಕೊಂದರೆ, ಭೀಮನು ಹಿಡಿಂಬ, ಬಕಾಸುರ, ಕಿಮ್ಮೀರ ಮುಂತಾದ ರಾಕ್ಷಸರನ್ನು ಕೀಚಕ, ಅನುಕೀಚಕ, ಜರಾಸಂಧ ಮುಂತಾದ ದುಷ್ಟ ರಾಜರನ್ನು, ನೂರು ಜನ ಕೌರವರನ್ನು ಯಾವುದೇ ಗೊಂದಲಕ್ಕೊಳಗಾಗದೆ ನಿರ್ದಾಕ್ಷಿಣ್ಯವಾಗಿ ಕೊಂದನು.

ಧರ್ಮರಾಜನು ಭೀಮನ ದೂರದೃಷ್ಟಿಯ ನಿಷ್ಕರ್ಷೆಗೆ ಓಗೊಟ್ಟು ಸ್ವಾತಂತ್ರ್ಯವನ್ನು ನೀಡಿದ್ದರೆ ಮುಂದೆ ಒದಗಬಹುದಾದ ಸಾರ್ವತ್ರಿಕ ನಾಶವನ್ನು ತಪ್ಪಿಸಬಹುದಿತ್ತು. ಕೇವಲ ದುರ್ಯೋಧನ, ದುಶ್ಶಾಸನ, ಕರ್ಣ, ಶಕುನಿ, ಅಶ್ವತ್ಥಾಮರನ್ನು ವಧಿಸಿ ಇಷ್ಟೆಲ್ಲಾ ಅವಾಂತರಗಳನ್ನು ತಪ್ಪಿಸಬಹುದಿತ್ತು. ಆಪ್ತ ಜನರು, ಗುರು ಹಿರಿಯರು, ಹದಿನೆಂಟು ಅಕ್ಷೋಹಿಣೀ ಸೈನ್ಯ ಇವುಗಳ ವಿನಾಶ ಹಾಗೂ ೧೩ ವರ್ಷಗಳ ಕಷ್ಟಕಾರ್ಪಣ್ಯಗಳ ನಂತರ ದೊರಕಿದ ಜಯವನ್ನು ಕಂಡು ಹಿರಿಹಿಗ್ಗುವ ಬದಲು ಯುಧಿಷ್ಠರನಿಗೆ ಕ್ಷತ್ರಿಯತ್ವದ ಮೇಲೆಯೇ ಜುಗುಪ್ಸೆ ಬಂದು ಬಿಟ್ಟಿತ್ತು.

ರಾಜಸೂಯ ಯಜ್ಞಕ್ಕೆ ಮುನ್ನ ಜರಾಸಂಧನನ್ನು ಕೊಲ್ಲುವುದು ಅಷ್ಟು ಸುಲಭವಲ್ಲ ಎಂದು ಯುಧಿಷ್ಠಿರನೂ ಚಿಂತಾಕ್ರಾಂತನಾಗುತ್ತಾನೆ. ಭೀಮಸೇನನು ಆಗ, ''ಹೇ ಧರ್ಮರಾಜ ಯಾವುದೇ ಕಾರ್ಯಕ್ಕೆ ಪ್ರವೃತ್ತರಾಗದೇ ಸ್ವಸ್ಥರಾಗಿ ಕುಳಿತುಕೊಳ್ಳುವವರು ಹುತ್ತದಂತೆ ನಾಶವಾಗಿ ಹೋಗುತ್ತಾರೆ. ಹಾಗೆಯೇ ಬಲಶಾಲಿಗಳನ್ನು ಹೊಂದಿರುವ ರಾಜನು ಪ್ರಯತ್ನಶೀಲನಾಗದಿದ್ದಲ್ಲಿ ಆತನೂ ನಾಶನಾಗುತ್ತಾನೆ. ಹೀಗೆ ಕೇವಲ ಶ್ರೀ ಕೃಷ್ಣನನ್ನೇ ಅವಲಂಬಿಸಿ ಕುಳಿತರೆ ನಿನ್ನದೂ ಅದೇ ಪಾಡಾಗುತ್ತದೆ. ಎಚ್ಚರಿಕೆಯಿಂದ ವರ್ತಿಸಿದರೆ ಬಲಿಷ್ಠ ಶತ್ರುವನ್ನು ಸೋಲಿಸಲು ಸಾಧ್ಯ. ಈ ಕಾರ್ಯವನ್ನು ನಾವು ಸಿದ್ಧಿಯತ್ತ ಕೊಂಡೊಯ್ಯೋಣ'' ಎಂದು ನುಡಿಯುತ್ತಾನೆ. ರಾಜಸೂಯಯಾಗ ದಿಗ್ವಿಜಯದಲ್ಲಿ ದಾಶಾರ್ಣರಾಜ್ಯದ ಸುಧರ್ಮ ಎಂಬುವವನನ್ನು ಸೋಲಿಸಿದನು. ಆ ಯುದ್ಧದಲ್ಲಿ ಸುಧರ್ಮನು ತೋರಿದ ಅಪೂರ್ವ ಪರಾಕ್ರಮವನ್ನು ಗಮನಿಸಿ ಭೀಮಸೇನನು ಅವನಿಗೆ ತನ್ನ ಸೈನ್ಯದ ಅಧಿಪತ್ಯವನ್ನು ಕೊಟ್ಟನು. ಇದರಿಂದ ಅವನ ದೂರದೃಷ್ಟಿ, ಗುಣಗ್ರಾಹಿತೆ ಕಂಡುಬರುತ್ತದೆ.

ಹಸ್ತಿನಾಪುರದಲ್ಲಿ ದ್ಯೂತವನ್ನು ಆಡಿ ಎಲ್ಲವನ್ನೂ ಕಳೆದುಕೊಂಡನಂತರ, ನಾನು ಈ ಕ್ಷಣದಲ್ಲೇ ಶತ್ರುಗಳನ್ನು ವಧಿಸುತ್ತೇನೆಂದು ಭೀಮನು ಮುಂದಾಗುತ್ತಾನೆ. ಕೋಪಿಷ್ಠ, ದುಡುಕು ಸ್ವಭಾವದವನೆಂದೆನಿಸಿದರೂ ಮುಂದೆ ವನವಾಸದಲ್ಲಿ ಪಾಂಡವರನ್ನು ಭೇಟಿಯಾಗಿ ಶ್ರೀಕೃಷ್ಣನು, ''ನಾನು ದ್ಯೂತವು ನಡೆದಾಗ ಅಲ್ಲಿದ್ದಿದ್ದರೆ ಕೂಡಲೆ ಎಲ್ಲರನ್ನೂ ಸಂಹಾರ ಮಾಡುತ್ತಿದ್ದೆ'' ಎಂದು ಹೇಳಿದನು.

ಎಲ್ಲವನ್ನು ದೇವರೇ ನೋಡಿಕೊಳ್ಳುತ್ತಾನೆಂಬ ಸಾತ್ತ್ವಿಕ ಸೋಗಿನ ಸೋಮಾರಿತನ, ದುರ್ಬಲತೆಯಿಂದ ಕೈಕಟ್ಟಿ ಕುಳಿತುಕೊಳ್ಳುವ ಪರಂಪರೆಯು ಈಗಲೂ ಮುಂದುವರೆದಿದೆ. ಇದು ಅವಶ್ಯವಾಗಿ ಮಾರ್ಪಾಟಾಗಬೇಕು.

ವನವಾಸದ ಆದಿಯಲ್ಲಿಯೇ ಭೀಮನು ಯುಧಿಷ್ಠಿರನಿಗೆ ಹೇಳುತ್ತಾನೆ- ಸತ್ಪುರುಷರು ಮೋಕ್ಷಾಕಾಂಕ್ಷೆಯನ್ನುಳಿದು ಧರ್ಮಮಾರ್ಗವಾಗಿ ಅರ್ಥ ಹಾಗೂ ಕಾಮ ಇವುಗಳನ್ನು ಪಡೆಯಬೇಕು. ಸತ್ಪುರುಷರು ಸುಮ್ಮನಿದ್ದರೆ ದುಷ್ಟರು ಅದನ್ನು ದುರ್ಬಲತೆಯೆಂದು ತಿಳಿದು ಕಪಟದಿಂದ ದುರ್ಮಾರ್ಗದಿಂದ ಅಧಿಕಾರವನ್ನು ಕಬಳಿಸುತ್ತಾರೆ. ಆಗ ಮಾನವ ಕುಲವೇ ಸಂಕಟಕ್ಕೆ ಒಳಗಾಗುತ್ತದೆ. ದುರ್ಯೋಧನನು ನಮ್ಮ ರಾಜ್ಯವನ್ನು ಧರ್ಮಮಾರ್ಗದಿಂದಾಗಲಿ, ಋಜು ಮಾರ್ಗದಿಂದಾಗಲೀ, ಪರಾಕ್ರಮದಿಂದಾಗಲೀ ಪಡೆದುಕೊಂಡಿರದೆ ಕಪಟದಿಂದ, ದ್ಯೂತದಿಂದ ಕಬಳಿಸಿರುತ್ತಾನೆ. ಲಾಕ್ಷಾಗೃಹದಲ್ಲಿ ಛಲದಿಂದ ಸುಟ್ಟುಹಾಕಲು ಯತ್ನಿಸಿರುತ್ತಾನೆ. ಧರ್ಮ ಹಾಗೂ ಕಾಮಗಳ (ಇಲ್ಲಿ ಕಾಮವೆಂದರೆ ಕೇವಲ ಕ್ಷುಲ್ಲಕ ಕಾಮವೊಂದನ್ನೇ ಗಣಿಸದೆ ಜಗತ್ತಿನಲ್ಲಿ ಮಹತ್ಕಾರ್ಯವನ್ನು ಕೀರ್ತಿ ಐಶ್ವರ್ಯವನ್ನು ಸಂಪಾದಿಸುವ, ಪರೋಪಕಾರ ಮುಂತಾದ ಸಾತ್ತ್ವಿಕ ಮನೋಭಿಲಾಷೆಯ ಕಡೆ ಹೆಚ್ಚಿನ ಒತ್ತನ್ನು ನೀಡಿ ಅರ್ಥೈಸಬೇಕು) ಉತ್ಪತ್ತಿ ಸ್ಥಾನವಾದ ಅರ್ಥವನ್ನು ಧಿಕ್ಕರಿಸಿ ಈ ಘೋರಾರಣ್ಯದ ಮಧ್ಯದಲ್ಲಿ ದುಃಖವನ್ನೇ ಭೋಗಿಸುತ್ತಾ ಏತಕ್ಕಾಗಿ ಕುಳಿತಿರುವಿ? ಈ ಹಿಂದೆಯೇ ಆ ಧೃತರಾಷ್ಟ್ರನ ಕುಪುತ್ರರನ್ನು ವಧಿಸದೇ ಹೋಗಿದ್ದರಿಂದ ಈ ತಾಪವನ್ನು ಸಹಿಸಬೇಕಾಗಿದೆ. ಈ ರೀತಿಯ ವನವಾಸವನ್ನು ಕೇವಲ ದುರ್ಬಲ ವ್ಯಕ್ತಿಗಳು ಮಾತ್ರ ಅವಲಂಬಿಸುತ್ತಾರೆ. ಬಲಸಂಪನ್ನರು ಎಂದಿಗೂ ಆಶ್ರಯಿಸರು. ಮಾನವರ ನಿಜವಾದ

ಕಲ್ಯಾಣದ ಸಾಧನೆಗಳೆಂದರೆ ಮೋಕ್ಷ ಇಲ್ಲವೇ ಅಭ್ಯುದಯ. ಆದ್ದರಿಂದ ನೀನು ಮೋಕ್ಷವನ್ನಾದರೂ ಪಡೆ; ಇಲ್ಲವೇ ಅಭ್ಯುದಯವನ್ನು ಸಂಪಾದಿಸು. ಇತ್ತ ಮೋಕ್ಷವೂ ಇಲ್ಲ ಅತ್ತ ಅಭ್ಯುದಯವೂ ಇಲ್ಲ , ಈ ರೀತಿ ಎಡಬಿಡಂಗಿ ಸ್ಥಿತಿಯಲ್ಲಿರುವ ಪುರುಷನು ರೋಗಗ್ರಸ್ತ ಮನುಷ್ಯನಂತೆ ಕಷ್ಟದಾಯಕ ಜೀವನವನ್ನು ಬಾಳುತ್ತಾನೆ. ಕರ್ಮರೂಪದ ಧರ್ಮವೇ ಶ್ರೇಷ್ಠವಾದ ಧರ್ಮ. ಇಹಲೋಕ ಹಾಗೂ ಪರಲೋಕದಲ್ಲಿ ಸಹ ಅದು ಫಲಪ್ರದವೆನಿಸುತ್ತದೆ. ಧರ್ಮಕ್ಕಿಂತ ಶ್ರೇಷ್ಠವಾಗಿರುವುದು ಯಾವುದೂ ಇಲ್ಲವಾಗಿದ್ದರೂ ಸಾಕಷ್ಟು ಅರ್ಥದ ಬಲವಿದ್ದರೆ ಮಾತ್ರ ಧರ್ಮವನ್ನಾಚರಿಸಲು ಸಾಧ್ಯ. ನಮಗೆ ಮೋಸಮಾಡಿದವರನ್ನು ವಧಿಸುವುದೇ ನಿಜವಾದ ಧರ್ಮ *(ವನಪರ್ವ)* ಎಂದು ಶ್ರೀ ಕೃಷ್ಣನೂ ಮುಂದೆ ಹೇಳಿರುತ್ತಾನೆ.

ಧರ್ಮದ ಗತಿ ಅತ್ಯಂತ ಸಂದಿಗ್ಧವಾದದ್ದು. ಕೌರವರ ಘೋಷಯಾತ್ರೆಯ ಸಂದರ್ಭದಲ್ಲಿ ಭೀಮನ ಧರ್ಮವಿವೇಚನೆ ಯುಧಿಷ್ಠಿರನನ್ನೂ ಮೀರಿದ್ದು. ಇಲ್ಲಿ ಯುಧಿಷ್ಠಿರನು ತನ್ನ ಸ್ವಾರ್ಥದ ಸತ್ಯ-ಧರ್ಮ ಪರಿಪಾಲಕನೆಂಬ ಕೀರ್ತಿಗೆ ಜೋತಾಡುತ್ತಿರುವವನಂತೆ ಕಂಡು ಬರುತ್ತಾನೆ. ಸರ್ವಜನರ ಹಿತ ಬಹುಜನ ಸುಖಕ್ಕಾಗಿ ಶೀಘ್ರವಾಗಿ ಯೇನಕೇನಪ್ರಕಾರೇಣ ದುಷ್ಟದಮನ ಆವಶ್ಯಕತೆಯನ್ನು ಕಡೆಗಾಣಿಸುತ್ತಾನೆ. ಧುರ್ಯೋದನಾದಿ -ಗಂಧರ್ವ ನಾಯಕ ಚಿತ್ರಸೇನಾದಿಗಳ ನಡುವೆ ಚಕಮಕಿ ನಡೆದು ದುರ್ಯೋಧನನನ್ನು ಬಂಧಿಸಿ ಸೆಳೆದೊಯ್ದರು. ಕರ್ಣ ಎಂದಿನಂತೆ ಓಡಿಹೋದ! ದುರ್ಯೋಧನನ ಸೈನ್ಯ ಪಾಂಡವರಿಗೆ ಶರಣಾಯ್ತು. ಯುಧಿಷ್ಠಿರನಿಗೆ ಅನಾಯಾಸವಾಗಿ ಒದಗಿ ಬಂತು ಈ ಅವಕಾಶ. ಅನುಕೂಲ ಪ್ರಸಂಗ - ಶತ್ರುಶತ್ರು ಮಿತ್ರ. ಶಪಥವೂ ಮುರಿಯದೆ ಶತ್ರು ದಮನವಾಗುವಾಗ ತಟಸ್ಥನಾಗಿ ಬಿಟ್ಟಿದ್ದರೆ ಗಂಧರ್ವರೇ ಅವನನ್ನು ಮುಗಿಸುತ್ತಿದ್ದರು. ಭೀಮನು ಪಾಂಡವರ ಸಹಾಯವನ್ನು ತಡೆಯಲೆತ್ನಿಸುತ್ತಾನೆ. ತನ್ನ ಪ್ರತಿಜ್ಞೆಯಾದ ದುಶ್ಶಾಸನ ದುರ್ಯೋದನ ವಧೆಯನ್ನು ಬಿಡಲು ಸಿದ್ಧನಾಗಿದ್ದಾನೆ. **ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಂ** *(ವನಪರ್ವ)*. ನಾವು ಮಾಡಬೇಕಾದ ಕೆಲಸವನ್ನು ಗಂಧರ್ವರೇ ಮಾಡಲಿದ್ದಾರೆ ಎಂದನು. ಆದರೆ ಯುಧಿಷ್ಠಿರನು ಅತ್ಯಂತ ಶ್ಲಾಘನೀಯ ಶ್ಲೋಕವೊಂದನ್ನು ಉದ್ಗರಿಸುತ್ತಾನೆ:

**ಪರೈಃ ಪರಿಭವೇ ಪ್ರಾಪ್ತೇ ವಯಂ ಪಂಚೋತ್ತರಂ ಶತಮ್ ।**
**ಪರಸ್ಪರ ವಿರೋಧೇ ತು ವಯಂ ಪಂಚ ಶತಂ ತು ತೇ ॥**

*(೪.೨೪೩.೪)*

ಈ ಸಂದರ್ಭದಲ್ಲಿ ಯಾರು ಸರಿ ಎಂದು ನಮ್ಮಂತಹವರು ವಿವೇಚಿಸಿ ನಿರ್ಧಾರಕ್ಕೆ ಬರುವುದು ಕಷ್ಟ. ಯುಧಿಷ್ಠಿರನದು ದೈವೀ ಸಂಕಲ್ಪ ದೃಷ್ಟಿ, ಭೀಮನದು ಪೌರುಷಾಕಾರ ದೃಷ್ಟಿ. ಇವೆರಡ ಸಮನ್ವಯವಲ್ಲದ ಪ್ರತಿದ್ವಂದ್ವ ಪರಿಸ್ಥಿತಿಯಲ್ಲಿ ಯಾವುದು ಮೇಲೆಂದು ಹೇಳುವುದು ಕಷ್ಟ. ಒಂದನ್ನಂತೂ ಖಂಡಿತ ಹೇಳಬಹುದು, ಭಾರತದಲ್ಲಿ ಹಿಂದೆ ನಡೆದ ವಿದೇಶೀ ಆಕ್ರಮಣದ ವಿಷಯದಲ್ಲಿ ಯುಧಿಷ್ಠಿರನ ನೀತಿಯನ್ನು ಅನುಸರಿಸುವುದು ಉಚಿತವಾಗಿದೆಯೇ ಹೊರತು ಈ ಸಂದರ್ಭದಲ್ಲಲ್ಲ.

ಕ್ಷತ್ರಿಯ ಧರ್ಮದ ಮಿತಿ ಇದೇ, ನಮಗೆ ಬೇಕಾಗಲಿ ಬೇಡವಾಗಲಿ ದುಷ್ಟರಿರುವ ತನಕ ಶಿಷ್ಟ-ರಾಷ್ಟ್ರ ರಕ್ಷಣೆಯ ವ್ಯಾಪಾರ ನಿಲ್ಲವು. ದುಷ್ಟರೂ ಇಲ್ಲ, ಶಿಷ್ಟರೂ ಇಲ್ಲ, ರಾಷ್ಟ್ರ ರಕ್ಷಣೆಯೂ ಇಲ್ಲ ಎಲ್ಲವೂ ಕಲ್ಪಿತಮಾಯೆ ಎಂಬ ವಾದ ಭೈಕ್ಷಚರ್ಯವೇ ಮೇಲೆಂದು ಸೋಲುವ ದೀನರಿಗೆ ಸರಿಯಾದದ್ದು.

ಅನೇಕ ದ್ವಂದ್ವ ಪರಿಸ್ಥಿತಿಯಲ್ಲೆಲ್ಲ ಧರ್ಮಾರ್ಜುನರು ಒಂದು ಭೀಮನು ಮತ್ತೊಂದು ಪಕ್ಷವಾಗಿ ಅವರ ನಿರ್ಧಾರವೇ ಅಂತಿಮವಾಗುತ್ತಿರುತ್ತದೆ. ಅವನಿಗೆ ಮಾನ ಪೂಜನಗಳನ್ನಿತ್ತು ಕೊಂಡಾಡಿದರೂ ಅವರಿಬ್ಬರೂ ಅನೇಕ ಬಾರಿ ಅವನ ಸಲಹೆಯನ್ನು ಒಪ್ಪುತ್ತಿರಲಿಲ್ಲ.

### ಭೀಮನೂ ಶಾಂತಿ ಪ್ರಿಯನೇ

ಶ್ರೀಕೃಷ್ಣನು ಶಾಂತಿ ಸಂಧಾನಕ್ಕೆ ಹೊರಟಾಗ ಭೀಮನು,

**ಅಹಮೇತದ್ಬ್ರವೀಮ್ಯೇವಂ ರಾಜಾ ಚೈವ ಪ್ರಶಂಸತಿ ।**
**ಅರ್ಜುನೋ ನೈವ ಯುದ್ಧಾರ್ಥೀ ಭೂಯಸೀ ಹಿ ದಯಾರ್ಣವೇ ॥**

ನಮಗಾರಿಗೂ ಯುದ್ಧ ಬೇಡವೆಂಬುದಕ್ಕೆ ಹೇಳಲು ನನ್ನ ಮಾತೇ ಸಾಕ್ಷಿ. ರಾಜನೂ ಸಹ ನನ್ನ ಮಾತನ್ನು ಪ್ರಶಂಸಿಸುತ್ತಾನೆ. ಅರ್ಜುನನಿಗಂತೂ ಯುದ್ಧ ಮಾಡುವ ಇಚ್ಛೆ ಇಲ್ಲ ಅವನೂ ದಯಾಪರನು. ಆದ್ದರಿಂದ ನೀನು ದುರ್ಯೋಧನನನ್ನು ಉದ್ರೇಕಿಸುವಂತಹ ಯಾವ ಮಾತನ್ನೂ ಆಡಬೇಡ. ಯುದ್ಧ ನಡೆಯದಂತೆಯೇ ಆದಷ್ಟೂ ಪ್ರಯತ್ನಿಸು ಎಂಬರ್ಥದಲ್ಲಿ ನುಡಿಯುತ್ತಾನೆ.

ಈ ಮಾತುಗಳಿಂದ ಆಶ್ಚರ್ಯ ಚಕಿತನಾದ ಕೃಷ್ಣನು ಯುದ್ಧ ಕಾಲ ಸಮೀಪಿಸಿದಾಗ ಭೀಮನಿಗೂ ಭಯ ಆವರಿಸಿಬಿಟ್ಟಿತೆಂದು ಅಪಹಾಸ್ಯ ಮಾಡುತ್ತಾನೆ. ಆಗ ಭೀಮನು ಭರತವಂಶೀಯರು ವಿನಾಶವಾಗಬಾರದೆಂಬ ಕಾರಣಕ್ಕಷ್ಟೇ ನಾನಿದನ್ನು ಹೇಳಿದ್ದೆಂದು ಹೇಳಿದ. ಆಗ ಕೃಷ್ಣನು ಮನೋಗತ ಅಭಿಪ್ರಾಯವನ್ನರಿಯಲೆಂದೇ ನಾನು ಕೆಣಕಿದೆನೇ ಹೊರತು ನಿನ್ನನ್ನು ಪರೀಕ್ಷಿಲೋಸುಗವಲ್ಲ ಎನ್ನುತ್ತಾನೆ.

ಇಂದಿನ ಕಾಲಕ್ಕೆ ಬೇಕಾಗಿರುವುದು ಭೀಮನು ಕೃತಿಯಲ್ಲಿ ಆಚರಿಸಿದ ದುಷ್ಟ ಜನರ ರಕ್ತಪಾತವಲ್ಲ ; ಅವನಿಲ್ಲಿದ್ದ ಕ್ಷಾತ್ರ ಭಾವನೆ, ಛಲ ಮತ್ತು ಅದಮ್ಯ ಉತ್ಸಾಹ, ಅಸತ್ಯವನ್ನೂ ದುಷ್ಟತನವನ್ನು ವಿರೋಧಿಸುವ, ಅವುಗಳನ್ನು ಸೋಲಿಸುವವರೆಗೂ ನಿರಂತರ ಹೋರಾಟ ಮಾಡುವ ಸಂಕಲ್ಪ. ಈ ಭೀಮನ ಮನೋಭಾವನೆ ಬಾಹ್ಯ ಮತ್ತು ಆಂತರ್ಯದ ಶತ್ರುಗಳೊಡನೆ ಹೋರಾಡಲು ಮೇಲೆ ಸ್ವಾಮಿ ವಿವೇಕಾನಂದರು ತಿಳಿಸಿದಂತೆ ಪೀಠಿಕೆಯನ್ನು ಹಾಕುತ್ತದೆ. ನಾವು ಇದನ್ನು ಅನುಸರಿಸಿದಲ್ಲಿ, ಬಲವೇ ಧರ್ಮವೆಂದು ಬಾಳಿ ಬದುಕಿದ ಭೀಮಸೇನನಿಗೆ ಇದು ನಾವು